ಅವನಿಂದ ಪೂರ್ಣವಾಗಿ ತೊಲಗಿಲ್ಲ.

ಕೋಳಿ ಅಂಕದ ಆಕರ್ಷಣೆ ಹೇಗಿರುವುದೆಂಬುದಕ್ಕೆ ಮತ್ತೊಂದು ಘಟನೆ ಹೇಳುತ್ತೇನೆ. ತಂದೆಯ ಅಗಲಿಕೆಯ ಬಳಿಕ ನಡೆಯುವ ಕಾರ್ಯದಲ್ಲಿ ವ್ಯಕ್ತಿಯೊಬ್ಬರು ನಿರತನಾಗಿದ್ದರು. ಹಿರಿಯರ ಸಲಹೆಯಂತೆ ತಂದೆಯ ಅಸ್ಥಿ ವಿಸರ್ಜನೆ ಇತ್ಯಾದಿ ಕಾರ್ಯಗಳಿಗೆ ಗೋಕರ್ಣಕ್ಕೆ ದಿನ ನಿಗದಿಗೊಳಿಸಿಯೇ ಭಟ್ಟರ ಬಳಿಗೆ ಹೊರಟಿದ್ದರು. ಹೊತ್ತು ಮೂಡುವುದಕ್ಕೆ ಮುನ್ನವೆ ಮನೆಯಿಂದ ಹೊರಟರು. ಹಾಗೆ ಹೊರಟವರಿಗೆ ನೆರಮನೆಯ ಸೀನ ಸಿಕ್ಕಿ ನಡುರಾತ್ರಿ ಆರಂಭವಾದ ಹೊನಲು ಬೆಳಕಿನ ಕೋಳಿ ಅಂಕ ಇನ್ನು ಮುಗಿದಿಲ್ಲ ಎಂಬ ವರ್ತಮಾನ ನೀಡಿದ. ಚೂರು ಅಂಕದತ್ತ ಕಣ್ಣುಹಾಯಿಸಿ ಮುಂದುವರಿಯಲು ನಿರ್ಧರಿಸಿದರು. ತಂದೆಯ ಅಸ್ಥಿ ತುಂಬಿದ ಸಣ್ಣ ಮಡಿಕೆಯ ಸಮೇತ ಹೋದರು. ಅಸ್ಥಿಮಡಿಕೆ ಹಾಗೂ ಶ್ರಾದ್ಧಕಾರ್ಯದ ಸಾಮಾಗ್ರಿಗಳು ತುಂಬಿದ ಚೀಲವನ್ನು ಪಕ್ಕದ ಮರದ ತುದಿಗೆ ನೇತುಹಾಕಿ ಕೋಳಿ ಅಂಕದ ಆಸ್ವಾದನೆಯಲ್ಲಿ ಮುಳುಗಿದರು. ಯಾವ ಪುಣ್ಯವೊ ತಾವು ಹೊರಟ ಕಾರ್ಯದ ನೆನಪು ಮರುಕಳಿಸಿ ತಡವಾಗುತ್ತದೆ ಎಂದು ಗಡಿಬಿಡಿಯಲ್ಲೆ ಗೋಕರ್ಣದತ್ತ ಪಯಣ ಬೆಳಸಿದರು. ದಾರಿಯುದ್ದಕ್ಕೂ ಕೋಳಿಯದೆ ಮಾತು. ಹೊನ್ನಾವರದಲ್ಲಿ ಬಸ್ಸು ತಿಂಡಿಗೆ ನಿಂತಾಗ ಅಸ್ಥಿಯ ಚೀಲ ನೆನಪಾಗುವುದೆ. ಮುಂದೇನಾಯಿತು? ಎಂದು ನಾನು ಹೇಳಬೇಕಿಲ್ಲ. ಇದು ಕೋಳಿ ಅಂಕದ ಆಕರ್ಷಣೆಯ ಒಂದು ರೂಪ!

> **ಕುಕ್ಕುಟ, ಹೇಂಟೆ, ಹೈಡಿ, ಮುರುಗಿ, ಹುಂಜ ಇವಷ್ಟೆ ಅಲ್ಲ ಕೋಳಿಪಡೆಯ ಕೋಳಿಗಳನ್ನು ಅದರ ಬಣ್ಣವನ್ನು ಆಧರಿಸಿ ಉರಿಯ, ಕಬಾರ, ಗೂಬ, ಕೆಂಬೇರ, ಕುಕ್ಕಿನಬೆಳಿಯ ಇತ್ಯಾದಿ ಹೆಸರುಗಳಿಂದ ಗುರುತಿಸಲಾಗುತ್ತದೆ.**

ಜನಮಾನಸದಲ್ಲಿ ಹೀಗೆಲ್ಲ ಬೇರೂರಿನಿಂತ ಕೋಳಿಗೆ ಜನಬದುಕಿನ ಗತಿಬಿಂಬವಾದ ಸಾಹಿತ್ಯದಲ್ಲೂ ಸ್ಥಾನವಿದೆ. ನಮ್ಮ ಪ್ರಸಿದ್ಧ ಲೇಖಕರ ಕಾವ್ಯ, ಕಥೆ, ಲಲಿತ ಪ್ರಬಂಧ, ಕಾದಂಬರಿಗಳಲ್ಲಿ ಕೋಳಿಯ ಉಲ್ಲೇಖವು ಇದೆ. 'ಕೋಳಿ ಒಂದು ಕುಟುಕ ಕಂಡಡೆ / ಕೂಗಿ ಕರೆಯದೆ ತನ್ನ ಕುಲವೆಲ್ಲವ' ಎಂಬ ಬಸವಣ್ಣನವರ ವಚನದ ಈ ಸಾಲು ಕೋಳಿಯ ಸಾಂಘಿಕ ಬದುಕನ್ನು ಸ್ತುತಿಸಿದೆ. ಮಾಸ್ತಿಯವರ ಅತ್ಯುತ್ತಮ ಕಥೆಗಳಲ್ಲಿ ಒಂದೆಂದು ಗುರುತಿಸಿಕೊಂಡ 'ಜೋಗ್ಯೋರ ಅಂಜಪ್ಪನ ಕೋಳಿ ಕಥೆ'ಯಲ್ಲಿ ಅಂಜಪ್ಪನಷ್ಟೆ ಕೋಳಿಯೂ ಮುಖ್ಯವಾಗುತ್ತದೆ. ದೇವನೂರ ಮಹಾದೇವರ 'ಒಡಲಾಳ' ಕಾದಂಬರಿಯಲ್ಲಿ ಸಾಕವ್ವನಷ್ಟೆ ಅವಳ ಹುಂಜವೂ ಪ್ರಸಿದ್ಧವಾಗಿದೆ. ಗಿರೀಶ ಕಾರ್ನಾಡರ 'ಹಿಟ್ಟಿನಹುಂಜ' ಎಂಬ ನಾಟಕದ ಶೀರ್ಷಿಕೆಯಲ್ಲೂ ಇದಕ್ಕೆ ಸ್ಥಾನವಿದೆ. ಹೀಗೆ ಸಾಕಷ್ಟು ನಿದರ್ಶನಗಳು ಸಾಹಿತ್ಯದಲ್ಲಿ ಸಿಗುತ್ತವೆ. ಅದನ್ನು ಹೇಳಹೊರಟರೆ ಅದೇ ಮತ್ತೊಂದು ಪ್ರಬಂಧವಾದೀತು. ಕೋಳಿಯು ಸಾಹಿತ್ಯದಲ್ಲಿ ನಿರ್ವಚನಗೊಂಡ ಸ್ವರೂಪವು ಅಧ್ಯಯನಕ್ಕೆ ಒಳ್ಳೆ ವಸ್ತುವಾಗಬಲ್ಲದು.

ಊರಿನ ಕೋಳಿಗೆ ತನ್ನದೆ ಆದ ಪುರಾತನ ಪರಂಪರೆಯಿದೆ. ಆದರೆ ನಮ್ಮ ಪುರಾಣಿಕರು ಅದನ್ನು ವಿವರಿಸಲಿಲ್ಲ. ಮಾನವನ ಹುಟ್ಟಿನೊಂದಿಗೆ ಕೋಳಿಯ ಕಥನವು ಪ್ರಾರಂಭವಾಗುತ್ತದೆ. ಇದು ಎಷ್ಟು ಪ್ರಾಚೀನವೆಂದರೆ ನಮ್ಮ ಇತಿಹಾಸಕಾರರು ಸೂಚಿಸುವಂತೆ ಸಿಂಧುನದಿಯ ನಾಗರಿಕತೆಯ ಕಾಲಕ್ಕೆ ಗೂಳಿಕಾಳಗದಂತೆಯೆ ಕೋಳಿಕಾಳಗವು ಜನಪ್ರಿಯವಾಗಿತ್ತಂತೆ. ಈಗ ಕರಾವಳಿ ಕರ್ನಾಟಕದ ಬದುಕಿನ